

بسم اللهِ الرّحمٰن الرّحيم

# ಹಝ್ರತ್ ಅಲಿ(ರ)

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **25-12-2020** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

(ತಶಹ್ಹುದ್, ತಅವ್ವುಝ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ *ಹೀಗೆ ಹೇಳಿದರು:*

ಹಝ್ರತ್ ಉಸ್ಮಾನ್(ರ)ರ ಶಹಾದತಿಗೆ ಸಂಬಂಧಪಟ್ಟು ಒಂದು ಮುಖ್ಯವಾದ ಸಂಗತಿಯ ಕಡೆಗೆ ಅಹ್ಮದಿಯರ ಗಮನ ಸೆಳೆಯುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ:

ನೀವು ಸಹ ಸಹಾಬಿಯರ ಹಾಗೆಯೇ ಆಗಿರುವಿರಿ. ಆದ್ದರಿಂದ ಮುಸ್ಲಿಮರು ಹೇಗೆ ನಾಶವಾದರು ಮತ್ತು ಅವರ ನಾಶಕ್ಕೆ ಕಾರಣವಾದ ಸಂಗತಿಗಳೇನಾಗಿದ್ದುವು ಎಂಬುದರ ಕುರಿತು ಚರಿತ್ರೆಯಿಂದ ನಿಮಗೆ ನಾನು ವಿವರಿಸಿಕೊಡಲು ಬಯಸುತ್ತೇನೆ. ಆದ್ದರಿಂದ ನೀವು ಜಾಗರೂಕರಾಗಿರಿ ಮತ್ತು ನವ ಅಹ್ಮದಿಯರಾಗಿ ನಮ್ಮ ಬಳಿ ಬರುವವರ ಧಾರ್ಮಿಕ ಶಿಕ್ಷಣದ ವ್ಯವಸ್ಥೆಯನ್ನು ಮಾಡಿರಿ. ಹಝ್ರತ್ ಉಸ್ಮಾನ್(ರ)ರ ಕಾಲದಲ್ಲಿ ತಲೆಯೆತ್ತಿದ್ದ ಆ ಪಿತೂರಿ ಸಹಾಬಿಯರಿಂದ ಉಂಟಾಗಿರಲಿಲ್ಲ. ಫಿತ್ನಕ್ಕೆ ಕಾರಣಕರ್ತರು ಸಹಾಬಿಯರು ಎಂದು ಹೇಳುವವರು ತಪ್ಪು ತಿಳುವಳಿಕೆ ಹೊಂದಿದವರಾಗಿದ್ದಾರೆ. ಈ ಪಿತೂರಿಗೆ ಕಾರಣಕರ್ತರು ಸಹಾಬಿಯರು ಆಗಿರಲಿಲ್ಲ. ಬದಲಿಗೆ ಹೊಸಬರಾಗಿ ನಂತರ ಬಂದವರೇ ಇದಕ್ಕೆ ಕಾರಣರಾಗಿದ್ದರು. ಅವರಿಗೆ ಹಝ್ರತ್ ಪೈಗಂಬರ್(ಸ)ರ ಸಹವಾಸದ ಸೌಭಾಗ್ಯ ಸಿಕ್ಕಿರಲಿಲ್ಲ ಮತ್ತು ಅವರ ಬಳಿಯಲ್ಲಿ ಕುಳಿತಿರಲಿಲ್ಲ. ಆದ್ದರಿಂದ ನಾನು ನಿಮ್ಮ ಗಮನವನ್ನು ಇದರ ಕಡೆಗೆ ಸೆಳೆಯುತ್ತೇನೆ ಮತ್ತು ಫಿತ್ನಗಳಿಂದ ರಕ್ಷಣೆ ಹೊಂದಲಿರುವ ಮಾರ್ಗವನ್ನು ಹೇಳುತ್ತೇನೆ. ಅದೇನೆಂದರೆ, ಹೆಚ್ಚಾಗಿ ಖಾದಿಯಾನಿಗೆ ಬನ್ನಿರಿ. ಪುನಃ ಪುನಃ ಬನ್ನಿರಿ. (ಆ ಸಮಯದಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಖಾದಿಯಾನಿನಲ್ಲಿದ್ದರು.) ನಿಮ್ಮ ವಿಶ್ವಾಸ ತಾಜಾ ಆಗಿ ಇರಲು ಮತ್ತು ಅಲ್ಲಾಹನ ಮೇಲಿನ ಭಯಭಕ್ತಿ ವರ್ಧಿಸುತ್ತಿರಲು ಇಲ್ಲಿಗೆ ಪದೇ ಪದೇ ಬರುತ್ತಾ ಇರಿ.

ವರ್ತಮಾನ ಕಾಲದಲ್ಲಿ ಅಲ್ಲಾಹನು ನಮಗೆ ಎಂ.ಟಿ.ಎ.ಯ ಸೌಕರ್ಯವನ್ನು ಒದಗಿಸಿ ಕೊಟ್ಟಿದ್ದಾನೆ. ಆದ್ದರಿಂದ ಹಝ್ರತ್ ಮಸೀಹ್ ಮೌಊದ್(ಅ)ರ ಗ್ರಂಥಗಳನ್ನು ಸ್ವತಃ ಓದುವುದರೊಂದಿಗೆ ಎಂ.ಟಿ.ಎ.ದೊಂದಿಗೆ ಸಹ ಸಂಬಂಧವಿರಿಸಿ ಕೊಳ್ಳಿರಿ. ಖಿಲಾಫತಿನೊಂದಿಗೆ ಸಂಬಂಧ ನೆಲೆ ನಿಲ್ಲುವಂತಾಗಲು, ಉತ್ತಮಗೊಳ್ಳಲು ಮತ್ತು ವರ್ಧಿಸುತ್ತಾ ಇರಲು ವಿಶೇಷವಾಗಿ ಜುಮುಅದ ಖುತ್ಬಗಳನ್ನು ಎಂ.ಟಿ.ಎ. ಮೂಲಕ ಖಂಡಿತವಾಗಿಯೂ ಕೇಳಿರಿ.

ಜಮಲ್ ಯುದ್ಧದ ಬಗ್ಗೆ ಹೀಗೆ ವರದಿಯಾಗಿದೆ. ಜಮಲ್ ಯುದ್ಧ ಹಝ್ರತ್ ಅಲಿ(ರ) ಮತ್ತು ಹಝ್ರತ್ ಆಯಿಶ(ರ)ರ ನಡುವೆ ಹಿಜರೀ 36ರಲ್ಲಿ ನಡೆದಿತ್ತು. ಹಝ್ರತ್ ಆಯಿಶ(ರ)ರೊಂದಿಗೆ ಹಝ್ರತ್ ತಲ್‌ಹ(ರ) ಮತ್ತು ಹಝ್ರತ್ ಝುಬೇರ್(ರ) ಸಹ ಸೇರಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಇದರ ಕುರಿತು ಹೀಗೆ ಹೇಳುತ್ತಾರೆ:

ಈ ಯುದ್ಧದ ಆರಂಭದಲ್ಲೇ ಹಝ್ರತ್ ಅಲಿಯವರ ನಾಲಗೆಯಿಂದ ಹಝ್ರತ್ ಪೈಗಂಬರ್(ಸ)ರ ಒಂದು ಭವಿಷ್ಯವಾಣಿಯನ್ನು ಆಲಿಸಿಕೊಂಡು ಹಝ್ರತ್ ಝುಬೇರ್(ರ) ಯುದ್ಧದಿಂದ ಬೇರ್ಪಟ್ಟು ನಿಂತಿದ್ದರು. ಹಝ್ರತ್ ಅಲಿ(ರ)ರ ವಿರುದ್ಧ ಯುದ್ಧ ಮಾಡುವುದಿಲ್ಲವೆಂದು ಹಝ್ರತ್ ಝುಬೇರ್(ರ) ಶಪಥ ಮಾಡಿದ್ದರು. ಸಂಗತಿಯನ್ನು ಮನವರಿಕೆ ಮಾಡುವುದರಲ್ಲಿ ತಪ್ಪಾಗಿದೆ ಎಂದು ಅವರು ಸಮ್ಮತಿಸಿದರು. ಇನ್ನೊಂದು ಕಡೆ ಹಝ್ರತ್ ತಲ್‌ಹ(ರ) ಸಹ ತನ್ನ ಮರಣಕ್ಕೆ ಮುಂಚಿತವಾಗಿ ಹಝ್ರತ್ ಅಲಿಯವರಿಗೆ ಬೈಅತ್ ಮಾಡಿದರು. ಇತರ ಸಹಾಬಿಯರ ಭಿನ್ನಾಭಿಪ್ರಾಯಗಳು ಜಮಲ್ ಯುದ್ಧದ ಸಂದರ್ಭದಲ್ಲೇ ತೀರ್ಮಾನವಾಯಿತು. ಆದರೆ ಹಝ್ರತ್ ಮುಆವಿಯಾರ ಭಿನ್ನತೆ ಬಾಕಿಯಾಗಿ ಉಳಿದಿತ್ತು. ಅದು ಸಿಫ್ಫೀನ್ ಯುದ್ಧಕ್ಕೆ ಕಾರಣವಾಯಿತು. ಜಮಲ್ ಯುದ್ಧದ ಈ ಹೋರಾಟದಲ್ಲಿ ಸಹಾಬಿಯರ ಕೈವಾಡ ಖಂಡಿತ ಇರಲಿಲ್ಲ. ಬದಲಿಗೆ ಈ ದುಷ್ಕೃತ್ಯವೂ ಹಝ್ರತ್ ಉಸ್ಮಾನ್(ರ)ರನ್ನು ಶಹೀದ್ ಮಾಡಿದ್ದವರದ್ದಾಗಿತ್ತು. ಜಮಲ್ ಯುದ್ಧ ಕೊನೆಗೊಂಡಾಗ ಹಝ್ರತ್ ಅಲಿ(ರ) ಹಝ್ರತ್ ಆಯಿಶರಿಗಾಗಿ ಸವಾರಿಯ ಮತ್ತು ಯಾತ್ರೆಯ ಎಲ್ಲ ವ್ಯವಸ್ಥೆಗಳನ್ನೂ ಮಾಡಿದ್ದರು. ಹಝ್ರತ್ ಆಯಿಶ(ರ)ರನ್ನು ಬಿಟ್ಟು ಬರಲು ಸ್ವತಃ ಅವರೇ ಹೋಗಿದ್ದರು. ಹಝ್ರತ್ ಆಯಿಶ(ರ)ರೊಡನೆ ಹೋಗಲಿರುವ ಜನರನ್ನು ಸಹ ರವಾನೆ ಮಾಡಿದ್ದರು. ಹಝ್ರತ್ ಆಯಿಶ(ರ) ರವಾನೆಯಾಗಬೇಕಾದ ದಿನ ಹಝ್ರತ್ ಅಲಿ(ರ) ಹಝ್ರತ್ ಆಯಿಶರ ಬಳಿಗೆ ಹೋದರು, ಅವರ ಪರವಾಗಿ ನಿಂತರು. ಎಲ್ಲರೂ ಇರುವಾಗಲೇ ಹಝ್ರತ್ ಆಯಿಶ(ರ) ಜನರ ಮುಂದೆ ಬಂದು ಹೀಗೆ ಹೇಳಿದರು: ಹೇ ನನ್ನ ಮಕ್ಕಳೇ, ನಾವು ತೊಂದರೆಕೊಟ್ಟೆವು. ನಮ್ಮ ಅತಿರೇಕದ ವರ್ತನೆಗಳಿಂದ ಪರಸ್ಪರ ಬೇಸರಗೊಂಡೆವು. ಇನ್ನು ಮುಂದೆ ನಮ್ಮ ಈ ಭಿನ್ನಾಭಿಪ್ರಾಯಗಳ ಕಾರಣದಿಂದ ಯಾವನೇ ವ್ಯಕ್ತಿ ಕೂಡ ಅನ್ಯೋನ್ಯ ಅತಿಕ್ರಮ ಮಾಡದಿರಲಿ. ಅಲ್ಲಾಹನಾಣೆ, ನನ್ನ ಮತ್ತು ಹಝ್ರತ್ ಅಲಿಯ ನಡುವೆ ಆರಂಭದಿಂದಲೇ ಸಣ್ಣಪುಟ್ಟ ಗಾರ್ಹಿಕ ಕಾರ್ಯಗಳಿಗೆ ಹೊರತು ಯಾವುದೇ ಭಿನ್ನಾಭಿಪ್ರಾಯವಿದ್ದಿರಲಿಲ್ಲ. ಹಝ್ರತ್ ಅಲಿ(ರ) ಹೇಳಿದರು: ಹೇ ಜನರೇ, ಹಝ್ರತ್ ಆಯಿಶ(ರ) ಉತ್ತಮವಾದ ಮತ್ತು ಸತ್ಯವಾದ ಮಾತನ್ನಾಡಿದ್ದಾರೆ. ಹಝ್ರತ್ ಆಯಿಶ(ರ) ಇಹಪರಲೋಕಗಳಲ್ಲಿ ಹಝ್ರತ್ ಪೈಗಂಬರ್(ಸ)ರ ಪರಿಶುದ್ಧ ಪತ್ನಿಯಾಗಿರುವರು. ನಂತರ ಹಝ್ರತ್ ಅಲಿ

ಹಝ್ರತ್ ಆಯಿಶರನ್ನು ಹಲವಾರು ಮೈಲುಗಳ ತನಕ ಅನುಗಮಿಸಿದರು. ಹಝ್ರತ್ ಆಯಿಶ(ರ)ರ ಜೊತೆಗೆ ಹೋಗಿ ಒಂದು ದಿನದ ನಂತರ ಮರಳಿ ಬರಲು ಹಝ್ರತ್ ಅಲಿ(ರ) ತನ್ನ ಮಕ್ಕಳೊಡನೆ ಆದೇಶಿಸಿದರು.

ಸಿಫ್ಫೀನ್ ಯುದ್ಧ ಹಝ್ರತ್ ಅಲಿ(ರ) ಮತ್ತು ಅಮೀರ್ ಮುಆವಿಯಾರ ನಡುವೆ ಹಿಜರೀ 37ರಲ್ಲಿ ನಡೆದಿತ್ತು. ಹಝ್ರತ್ ಅಲಿ(ರ) ಕೂಫದಿಂದ ಸೈನ್ಯದೊಂದಿಗೆ ಹೊರಟು ಸಿಫ್ಫೀನ್ ತಲುಪಿದಾಗ, ಸಿರಿಯದ ಸೈನ್ಯ ಅಮೀರ್ ಮುಆವಿಯರವರ ನೇತೃತ್ವದಲ್ಲಿ ಮೊದಲೇ ಡೇರೆ ಹಾಕಿರುವುದನ್ನು ಕಂಡರು. ಅವರ ಒಂದು ಸಂಘ ಫರಾತ್ ನದಿಯ ದಡವನ್ನು ವಶಪಡಿಸಿಕೊಂಡಿದ್ದರು. 'ನಾವು ಯುದ್ಧ ಮಾಡಲು ಬಂದಿಲ್ಲ, ಬದಲಿಗೆ ಅಮೀರ್ ಮುಆವಿಯರೊಂದಿಗೆ ರಾಜಿ ಮಾಡಿಕೊಳ್ಳಲು ಬಂದಿದ್ದೇವೆ' ಎಂದು ಹಝ್ರತ್ ಅಲಿ(ರ) ಅವರಿಗೆ ಭರವಸೆ ಕೊಟ್ಟರು. ಆದಾಗ್ಯೂ ಅಮೀರ್ ಮುಆವಿಯ ರಾಜಿಮಾಡಿಕೊಳ್ಳಲು ಒಪ್ಪಲಿಲ್ಲ. ಹಿಜರೀ 37ರ ಸಫರ್ ತಿಂಗಳಲ್ಲಿ ಯುದ್ಧ ಶುರುವಾಯಿತು. ಯುದ್ಧವು ಕೆಲವು ಕಾಲ ಯಾವುದೇ ತೀರ್ಪು ಕಾಣದೇ ನಡೆಯುತ್ತಿರುವುದನ್ನು ನೋಡಿಕೊಂಡು ಹಝ್ರತ್ ಮುಆವಿಯಾರ ಧೈರ್ಯ ಗುಂದಿತು. ಈ ಭಯಾನಕ ಸ್ಥಿತಿಯಲ್ಲಿ ಪವಿತ್ರ ಖುರ್ಆನಿನ ಪ್ರತಿಯನ್ನು ಈಟಿಯ ತುದಿಯಲ್ಲಿ ಕಟ್ಟಿ ಎತ್ತಿ ತೋರಿಸಿ ಈ ಗ್ರಂಥದ ಪ್ರಕಾರ ತೀರ್ಮಾನ ಮಾಡಲು ಹೇಳಬೇಕೆಂದು ಹಝ್ರತ್ ಅಮ್ರ್ ಬಿನ್ ಆಸ್(ರ) ಸಲಹೆ ನೀಡಿದರು. ಹಾಗೆಯೇ ಮಾಡಲಾಯಿತು. ಹಝ್ರತ್ ಅಲಿಯವರ ಸೈನ್ಯದ ಹೆಚ್ಚಿನವರು ಅಮೀರ್ ಮುಆವಿಯರ ಈ ಅಭಿಪ್ರಾಯವನ್ನು ಒಪ್ಪಿಕೊಂಡರು. ಉಭಯ ಪಕ್ಷಗಳು ಮಧ್ಯಸ್ಥರನ್ನು ಆಯ್ಕೆ ಮಾಡಿಕೊಂಡು ಆ ಇಬ್ಬರು ಮಧ್ಯಸ್ಥರು ಸೇರಿಕೊಂಡು ಪವಿತ್ರ ಖುರ್ಆನಿನ ನಿರ್ದೇಶನ ಪ್ರಕಾರ ಯಾವುದಾದರೂ ತೀರ್ಮಾನಕ್ಕೆ ಬರಬೇಕೆಂದು ಹೇಳಿದರು. ಚರಿತ್ರೆಯ ಪುಸ್ತಕಗಳಲ್ಲಿ ಈ ಘಟನೆಯನ್ನು ತಹ್ಕೀಂ ಎಂದು ಕರೆಯಲಾಗಿದೆ. ಅಂತೂ ಶಾಮಿಯರು ಹಝ್ರತ್ ಅಮ್ರ್ ಬಿನ್ ಆಸ್(ರ)ರನ್ನು ಆಯ್ಕೆ ಮಾಡಿದರು ಮತ್ತು ಹಝ್ರತ್ ಅಲಿ(ರ) ಹಝ್ರತ್ ಅಬೂಮೂಸಾ ಅಶ್ಅರೀರನ್ನು ನೇಮಕ ಮಾಡಿದರು. ಕರಾರು ಪತ್ರದಲ್ಲಿ ಹಸ್ತಾಕ್ಷರ ಮಾಡಿದ ನಂತರ ಸೈನ್ಯಗಳು ಹೊರಟು ಹೋಯಿತು.

ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಘಟನೆಯ ಬಗ್ಗೆ ಹೇಳುತ್ತಾರೆ: ಈ ತಹ್ಕೀಂ ಸತ್ಯದಲ್ಲಿ ಹಝ್ರತ್ ಉಸ್ಮಾನ್(ರ)ರ ಶಹಾದತಿನ ಘಟನೆಯದ್ದೇ ಆಗಿತ್ತು. ಪವಿತ್ರ ಖುರ್ಆನಿನ ಪ್ರಕಾರ ಇದರ ಬಗ್ಗೆ ತೀರ್ಮಾನ ಆಗುವುದು ಎಂದು ನಿಬಂಧನೆ ಮಾಡಲಾಗಿತ್ತು. ಆದರೆ ಹಝ್ರತ್ ಅಲಿ(ರ) ಮತ್ತು ಹಝ್ರತ್ ಮುಆವಿಯರನ್ನು ಅವರ ನೇತೃತ್ವದಿಂದ ವಜಾ ಮಾಡುವುದೇ ಉತ್ತಮ ಎಂದು ಅಮ್ರ್ ಬಿನ್ ಆಸ್ ಮತ್ತು ಅಬೂ ಮೂಸಾ ಅಶ್ಅರಿ ಇಬ್ಬರೂ ಸಮಾಲೋಚಿಸಿ ತೀರ್ಮಾನಿಸಿದರು. ಅಂತೂ ಇವರಿಬ್ಬರೂ ಈ ತೀರ್ಮಾನವನ್ನು ಘೋಷಿಸಲು ಒಂದು ಸಭೆಯ ಏರ್ಪಾಡು ಮಾಡಿದರು. ಹಝ್ರತ್ ಅಬೂಮೂಸಾ ಅಶ್ಅರಿಯೊಡನೆ ಹಝ್ರತ್ ಅಮ್ರ್ ಬಿನ್ ಆಸ್, ಮೊದಲು ನಿಮ್ಮ ತೀರ್ಮಾನವನ್ನು ಘೋಷಿಸಿರಿ ಎಂದು ಹೇಳಿದರು. ಅನಂತರ ನಾನು ಘೋಷಿಸುವೆನು. ಹಝ್ರತ್ ಅಲಿಯನ್ನು ಖಿಲಾಫತಿನಿಂದ ಪದಚ್ಯುತಿಗೊಳಿಸುವುದಾಗಿ ಹಝ್ರತ್ ಅಬೂಮೂಸಾ ಅಶ್ಅರಿ(ರ) ಘೋಷಿಸಿದರು. ಅನಂತರ ಹಝ್ರತ್ ಅಮ್ರ್ ಬಿನ್ ಆಸ್ ನಿಂತರು. ಅವರು ಹೀಗೆ ಹೇಳಿದರು: ಹಝ್ರತ್ ಅಲಿಯನ್ನು ಅಬೂಮೂಸಾ ಪದಚ್ಯುತಿಗೊಳಿಸಿರುವರು. ನಾನು ಸಹ ಅವರ ಈ ತೀರ್ಮಾನವನ್ನು ಒಪ್ಪಿಕೊಳ್ಳುತ್ತೇನೆ ಮತ್ತು ಹಝ್ರತ್ ಅಲಿಯವರನ್ನು ಖಿಲಾಫತಿನಿಂದ ವಜಾಗೊಳಿಸುತ್ತೇನೆ. ಆದರೆ ಮುಆವಿಯರನ್ನು ನಾನು ವಜಾಗೊಳಿಸುವುದಿಲ್ಲ. ಬದಲಿಗೆ ಅಧಿಕಾರದಲ್ಲೇ ನೆಲೆನಿಲ್ಲಿಸುವೆನು. ಹಝ್ರತ್ ಅಲಿ(ರ) ಈ ತೀರ್ಮಾನವನ್ನು ಒಪ್ಪಲಿಲ್ಲ. ಅವರು ಹೀಗೆ ಹೇಳಿದರು: ಮಧ್ಯಸ್ಥರನ್ನು ಈ ಉದ್ದೇಶಕ್ಕಾಗಿ ನಿಶ್ಚಯಿಸಲಾಗಿರಲಿಲ್ಲ. ಮಾತ್ರವಲ್ಲ ಅವರ ತೀರ್ಪು ಪವಿತ್ರ ಖುರ್ಆನಿನ ಆಜ್ಞೆ ಪ್ರಕಾರವೂ ಅಲ್ಲ. ನಾನು ಅದನ್ನು ಯಾವುದೇ ಸ್ಥಿತಿಯಲ್ಲೂ ಅಂಗೀಕರಿಸುವುದಿಲ್ಲ. ಹಝ್ರತ್ ಅಲಿಯವರೊಡನೆ ಮಧ್ಯಸ್ಥರನ್ನು ನಿಶ್ಚಯಿಸಲು ಒತ್ತಾಯಪಡಿಸಿದ್ದ, ಕಪಟ ವಿಶ್ವಾಸಿಯಾದ ಸಂಗಡಿಗನು ಹಝ್ರತ್ ಅಲಿಯ ಈ ಸಮರ್ಥನೆಯನ್ನು ಸಮ್ಮತಿಸಲಿಲ್ಲ. ಆತನು ಬೈಅತಿನಿಂದ ಬೇರ್ಪಟ್ಟುಕೊಂಡು ಖವಾರಿಜ್ ಎಂದು ಕರೆಯಲ್ಪಟ್ಟನು. ಖಲೀಫರನ್ನು ಅನುಸರಿಸಬೇಕಾದ ಆವಶ್ಯಕತೆಯಿಲ್ಲ ಮತ್ತು ಮುಸ್ಲಿಮರ ಬಹುಮತದ ತೀರ್ಮಾನ ಪ್ರಕಾರ ನಡೆಯಲಾಗುವುದೆಂಬ ವಾದವನ್ನು ಆತನು ಮಂಡಿಸಿದನು. ಏಕೆಂದರೆ ಯಾವನಾದರೂ ಒಬ್ಬ ವ್ಯಕ್ತಿಯನ್ನು ಅನುಸರಿಸಬೇಕೆಂದು ಹೇಳುವುದು **ಲಾ ಹುಕ್ಮ ಇಲ್ಲ ಲಿಲ್ಲಾಹ್** (ಆಜ್ಞಾಧಿಕಾರ ಅಲ್ಲಾಹನಿಗೆ ಹೊರತು ಇನ್ನಾರಿಗೂ ಇಲ್ಲ) ಎಂಬುದಕ್ಕೆ ವಿರುದ್ಧವಾಗಿದೆ ಎಂದು ವಾದಿಸಿದನು.

ನೆಹರ್ವಾನ್ ಯುದ್ಧ ಹಿಜರೀ 38ರಲ್ಲಿ ಹಝ್ರತ್ ಅಲಿ(ರ) ಮತ್ತು ಖವಾರಜ್‌ರ ನಡುವೆ ನಡೆದಿತ್ತು. ಸಿಫ್ಫೀನ್ ಯುದ್ಧದಲ್ಲಿ ತಹ್ಕೀಮ್‌ನ ವಿಷಯದಲ್ಲಿ ಹಝ್ರತ್ ಅಲಿಯೊಂದಿಗೆ ಅವರ ಸೈನ್ಯದ ಒಂದು ವಿಭಾಗಕ್ಕೆ ಭಿನ್ನಾಭಿಪ್ರಾಯ ಉಂಟಾಗಿತ್ತು. ಅವರು ಬಂಡಾಯವೇಳುತ್ತಾ ಬೇರ್ಪಟ್ಟು ಖವಾರಿಜ್ ಎಂದು ಕರೆಯಲ್ಪಟ್ಟರು. ಈ ಖವಾರಿಜಿಯರು ಹಝ್ರತ್ ಅಲಿಯೊಡನೆ ತೌಬ ಮಾಡಲು ಮತ್ತು ಖಿಲಾಫತಿನಿಂದ ಪದಚ್ಯುತಿಗೊಳ್ಳಲು ಬೇಡಿಕೆಯಿಟ್ಟರು. ಆದರೆ ಹಝ್ರತ್ ಅಲಿ(ರ) ಅದನ್ನು ಸ್ಪಷ್ಟವಾಗಿ ನಿರಾಕರಿಸಿದರು. ಹಝ್ರತ್ ಅಲಿ(ರ) ಅಮೀರ್ ಮುಆವಿಯರ ವಿರುದ್ಧ ಹೋರಾಡಲು ಪುನಃ ಸಿರಿಯಾದ ಕಡೆಗೆ ಹೋಗುವ ತಯಾರಿಯಲ್ಲಿ ನಿರತರಾಗಿದ್ದರು. ಆ ವೇಳೆ ಖವಾರಿಜ್‌ಗಳು ಕಿಡಿಗೇಡಿತನದ ಕೆಲಸಗಳನ್ನು ಶುರುಮಾಡಿದ್ದರು. ಈ ಸ್ಥಿತಿಯಲ್ಲಿ ಹಝ್ರತ್ ಅಲಿ(ರ) ಸುಮಾರು 65 ಸಾವಿರದಷ್ಟು ಸೈನಿಕರ ದಂಡಿನೊಂದಿಗೆ ಖವಾರಿಜಿಯರ ವಿರುದ್ಧ ಹೋರಾಡಲು ಹೊರಟರು. ಹಝ್ರತ್ ಅಲಿ(ರ) ನೆಹರ್ವಾನ್ ಎಂಬ ಪ್ರದೇಶಕ್ಕೆ ತಲುಪಿದಾಗ ಖವಾರಿಜಿಯರನ್ನು ರಾಜಿಮಾಡಿಕೊಳ್ಳಲು ಆಮಂತ್ರಿಸಲಾಯಿತು. ಆಗ ನಾಲ್ಕು ಸಾವಿರದಷ್ಟು ಸಂಖ್ಯೆಯಲ್ಲಿದ್ದ ಖವಾರಿಜ್‌ಗಳಲ್ಲಿ ನೂರು ಜನರು ಹಝ್ರತ್ ಅಲಿಯೊಡನೆ ಸೇರಿದರು ಮತ್ತು ದೊಡ್ಡ ಸಂಖ್ಯೆಯಲ್ಲಿ ಹಲವು ಜನರು ಕೂಫದ ಕಡೆಗೆ ಮರಳಿ ಹೋದರು. ಕೇವಲ ಒಂದು ಸಾವಿರದ

ಎಂಟುನೂರರಷ್ಟು ಜನರ ಸೈನ್ಯ ಅಬ್ದುಲ್ಲಾಹ್ ಬಿನ್ ವಹಬ್ ಖ಼ಾರಿಜಿಯ ನೇತೃತ್ವದಲ್ಲಿ ಮುಂದಕ್ಕೆ ಧಾವಿಸಿತು. ಹಝ್ರತ್ ಅಲಿಯವರ 65 ಸಾವಿರದಷ್ಟು ಜನರ ಸೈನ್ಯದೊಡನೆ ಯುದ್ಧ ನಡೆಯಿತು. ಅದರಲ್ಲಿ ಎಲ್ಲ ಖ಼ವಾರಿಜ್‌ಗಳು ಕೊಲ್ಲಲ್ಪಟ್ಟರು. ಹಝ್ರತ್ ಅಲಿಯ ಸೈನ್ಯದಿಂದ ಏಳು ವ್ಯಕ್ತಿಗಳು ಹುತಾತ್ಮರಾದರು.

(ಹುಝೂರ್ ಹೇಳಿದರು) ಹೇಗಿದ್ದರೂ ಇವರ ಬಗೆಗಿನ ವಿವರಣೆ ಮುಂದುವರೆಯುವುದು – ಇನ್ಶಾಅಲ್ಲಾಹ್. ಇಂದು ಸಹ ನಾನು ಪಾಕಿಸ್ತಾನ ಮತ್ತು ಅಲ್ಜೀರಿಯಾದ ಅಹ್ಮದಿಯರಿಗಾಗಿ ದುಆ ಮಾಡಲು ಹೇಳಬಯಸುತ್ತೇನೆ. ಅಲ್ಜೀರಿಯಾ ಬಗ್ಗೆ ಒಂದು ಸಂತೋಷದಾಯಕ ವಾರ್ತೆ ಏನೆಂದರೆ, ಕಳೆದ ಎರಡು ಮೂರು ದಿನಗಳಲ್ಲಿ ಸುಳ್ಳಾರೋಪಗಳಿಗೆ ಗುರಿಯಾದ ಹಲವಾರು ಅಹ್ಮದಿಯರನ್ನು ಎರಡು ವಿವಿಧ ನ್ಯಾಯಾಲಯಗಳು ಆರೋಪಗಳಿಂದ ವಿಮುಕ್ತಗೊಳಿಸಿವೆ. ಆದರೆ ಪಾಕಿಸ್ತಾನದ ಕೆಲವು ಅಧಿಕಾರಿಗಳು ಮತ್ತು ನ್ಯಾಯಾಧೀಶರುಗಳು ನ್ಯಾಯದಿಂದ ದೂರ ಹೋಗುತ್ತಿದ್ದಾರೆ. ತಮ್ಮ ಅಧಿಕಾರವನ್ನು ಅನ್ಯಾಯವಾಗಿ ಉಪಯೋಗಿಸುತ್ತಿದ್ದಾರೆ. ಅಲ್ಲಾಹನು ಅವರಿಗೆ ಹೃದಯಗಳ ದ್ವೇಷ ಮತ್ತು ಹಗೆಯನ್ನು ಹೋಗಲಾಡಿಸಿ ಕಾರ್ಯಗಳನ್ನು ಸರಿಯಾಗಿ ವೀಕ್ಷಿಸಲು ಸೌಭಾಗ್ಯ ನೀಡಲಿ. ಯಾರ ಸುಧಾರಣೆಯನ್ನು ಅಲ್ಲಾಹನು ವಿಧಿಸಿಲ್ಲವೋ ಅವರನ್ನು ಅಲ್ಲಾಹನು ಬೇಗನೇ ಹಿಡಿಗೂಡಲಿ. ಅಲ್ಲಾಹನು ಅಹ್ಮದಿಯರಿಗೆ ಪಾಕಿಸ್ತಾನದಲ್ಲೂ ಶಾಂತಿ ಮತ್ತು ಸಮಾಧಾನದ ಸ್ಥಿತಿ ಉಂಟುಮಾಡಲಿ. ವಿಶೇಷವಾಗಿ ಪಾಕಿಸ್ತಾನದಲ್ಲಿರುವ ಅಹ್ಮದಿಯರು ಐಚ್ಛಿಕ ಸತ್ಕರ್ಮಗಳನ್ನು ಮತ್ತು ದುಆಗಳನ್ನು ಹೆಚ್ಚು ಹೆಚ್ಚು ಮಾಡಬೇಕು. ಈ ದುಆಗಳಲ್ಲಿ **ರಬ್ಬಿ ಕುಲ್ಲಿ ಶೈಇನ್ ಖ಼ಾದಿಮುಕ ರಬ್ಬಿ ಫಹ್‌ಫಝ್ನೀ ವನ್ಸುರ್‌ನೀ ವರ್‌ಹಮ್‌ನೀ** ಎಂಬ ದುಆವನ್ನು ಮಾಡಿರಿ. **ಅಲ್ಲಾಹುಮ್ಮ ಇನ್ನಾ ನಜ್‌ಅಲುಕ ಫೀ ನುಹೂರಿಹಿಂ ವ ನಊಧುಬಿಕ ಮಿನ್ ಶುರೂರಿಹಿಂ** ಎಂಬ ದುಆ ಸಹ ಅಧಿಕವಾಗಿ ಮಾಡಿರಿ. ಅಲ್ಲಾಹನಿಂದ ಕ್ಷಮೆಯಾಚನೆ ಕಡೆಗೆ ಹೆಚ್ಚು ಗಮನವಹಿಸಬೇಕು. ದುರೂದ್ ಪ್ರಾರ್ಥನೆ ಕಡೆಗೆ ಸಹ ಗಮನ ವಹಿಸಿರಿ. ಈಗಿನ ಸ್ಥಿತಿಯಲ್ಲಿ ಅದರ ತುಂಬಾ ಆವಶ್ಯಕತೆಯಿದೆ. ನಾನು ಹೇಳಿದಂತೆ ನಫ್ಲ್ ನಮಾಝ್‌ಗಳನ್ನು ಸಹ ನಿರ್ವಹಿಸಿರಿ. ಅಲ್ಲಾಹನು ಅವರಿಗೆ ಅದರ ಸೌಭಾಗ್ಯ ನೀಡಲಿ ಮತ್ತು ಬೇಗನೇ ಅಲ್ಲಿನ ಸ್ಥಿತಿಗತಿಗಳನ್ನು ಅಲ್ಲಾಹನು ಸರಿಪಡಿಸಲಿ – ಆಮೀನ್.

(ಖುತ್‌ಬದ ಕೊನೆಯಲ್ಲಿ ಹುಝೂರ್, ಇತ್ತೀಚೆಗೆ ನಿಧನರಾದ ಸನ್ಮಾನ್ಯ ಹಿಂದ ಅಬ್ಬಾಸ್ ಸಾಹಿಬ, ಸನ್ಮಾನ್ಯ ರಿಝ್ವಾನ್ ಸಯ್ಯದ್ ನಈಮಿ ಸಾಹಿಬ್, ಸನ್ಮಾನ್ಯ ಮಲಿಕ್ ಅಲಿ ಮುಹಮ್ಮದ್ ಸಾಹಿಬ್, ಸನ್ಮಾನ್ಯ ಇಹ್ಸಾನ್ ಅಹ್ಮದ್ ಸಾಹಿಬ್ ಮತ್ತು ಸನ್ಮಾನ್ಯ ರಿಯಾಝುದ್ದೀನ್ ಶಮ್ಸ್ ಸಾಹಿಬ್‌ರ ಸ್ವಭಾವಗುಣಗಳನ್ನು ಪ್ರಸ್ತಾಪಿಸುತ್ತಾ ಅವರಿಗಾಗಿ ಮಗ್ಫಿರತಿನ ದುಆ ಮಾಡಿದರು. ಜುಮುಅ ನಮಾಝಿನ ನಂತರ ಅವರೆಲ್ಲರ ಜನಾಝ ಗಾಇಬ್ ನಮಾಝ್ ನಿರ್ವಹಿಸುವುದಾಗಿ ಹುಝೂರ್ ಹೇಳಿದರು.)

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis*** *(atba)*

*At, Masjid Mubarak, Islamabad, Tilford, UK, On 25-12-2020*

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim |***Layout****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian



***Email***: *khutuba.kannada@gmail.com*



**You can find all the Sermons archived at**: www.alislam.org/friday-sermon